# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ:17/08/2016

**ಪ್ರಕರಣ ಸಂಖ್ಯೆ: ಆರ್ಎ. 20/2014-15**

ಉಪಸ್ಥಿತರು: ಡಾ|| ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

**ಮೇಲ್ಮನವಿದಾರರು**

ಕೃಷ್ಣಮ್ಮ
ಕೋಂ ಡಿ.ನಾರಾಯಣಸ್ವಾಮಿ
ಕೃಷ್ಣಾಪುರ ಗ್ರಾಮ,
ವೇಮಗಲ್ ಹೋಬಳಿ,
ಕೋಲಾರ ತಾಲ್ಲೂಕು.
( ಶ್ರೀ ಎಸ್.ಶ್ರೀಕೃಷ್ಣ
-ವಕೀಲರು ರವರಿಂದ )

**ವಿರುದ್ಧ**

**ಎದುರುದಾರರು**

1. ಸಹಾಯಕ ಕಮೀಷನರ್
ಕೋಲಾರ ಉಪವಿಭಾಗ.
2. ಆರ್.ನಾರಾಯಣಸ್ವಾಮಿ
ಬಿನ್ ಲೇ. ಮುನಿಸ್ವಾಮಪ್ಪ
ಕೃಷ್ಣಾಪುರ ಗ್ರಾಮ,
ವೇಮಗಲ್ ಹೋಬಳಿ,
ಕೋಲಾರ ತಾಲ್ಲೂಕು
( ಶ್ರೀ ಎಂ.ಜಿ.ವೆಂಕಟರೆಡ್ಡಿ
-ವಕೀಲರು ರವರಿಂದ )

ವಿಷಯ: ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ, ಕೋಲಾರ ರವರ ಕ್ರಮಾಂಕ: ಆರ್.ಆರ್.ಟಿ.(ಕೋ)(ಕ)ಸಿ.ಆರ್.329/2013-14 ದಿನಾಂಕ 20/06/2014 ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

0-0-0

**ಪ್ರಸ್ತಾವನೆ.**

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 50 ರಂತೆ ಸಲ್ಲಿಸಿರುತ್ತಾರೆ.

**ಪ್ರಕರಣದ ಸಂಕ್ಷಿಪ್ತ ವಿವರ,**

ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಕೃಷ್ಣಾಪುರ ಗ್ರಾಮದ ಸ.ನಂ. 98 ರಲ್ಲಿನ 0-20 ಗುಂಟೆ ಜಮೀನನ್ನು ಸಿವಿಲ್ ನ್ಯಾಯಾಲಯದ ಪ್ರಕರಣ ಸಂಖ್ಯೆ ಓ.ಎಸ್.459/2004 ಮತ್ತು ಇ.ಎಕ್ಸ್43/2008 ರ ಆದೇಶದಂತೆ ಖಾತೆ ಮಾಡಲು ಕೋರಿ ಕೃಷ್ಣಮ್ಮ ಕೋಂ ಡಿ.ನಾರಾಯಣಸ್ವಾಮಿ ರವರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ವಿಚಾರಣೆ ನಂತರ ಸಹಾಯಕ ಕಮೀಷನರ್ ರವರು ಪ್ರಕರಣ ಸಂಖ್ಯೆ: ಆರ್.ಆರ್.ಟಿ.(ಕೋ)(ಕ)ಸಿ.ಆರ್.329/2013-14 ರಂತೆ ದಿನಾಂಕ 20/06/2014 ರಂದು ಹೊರಡಿಸಿದ ಆದೇಶದಲ್ಲಿ ಮೇಲ್ಮನವಿ ಅರ್ಜಿಯನ್ನು ವಜಾಕರಿಸಿರುತ್ತಾರೆ. ಸಹಾಯಕ ಕಮೀಷನರ್ ರವರ ಈ ಆದೇಶದಿಂದ ಬಾದಿತರಾದ ಮೇಲ್ಮನವಿದಾರರು ಈ ನ್ಯಾಯಾಲಯದಲ್ಲಿ ಪ್ರಸ್ತುತ ಮೇಲ್ಮನವಿ ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯನ್ನು ವಿಚಾರಣೆಗಾಗಿ ದಾಖಲಿಸಿಕೊಂಡು ಉಭಯತ್ರರಿಗೂ ನೋಟೀಸ್ ನೀಡಲಾಯ್ತು. ಉಭಯತ್ರರಿಗೂ ಸಾಕಷ್ಟು ಕಾಲಾವಕಾಶ ನೀಡಿ ವಿಚಾರಣೆ ಮಾಡಿದೆ.

ದಿನಾಂಕ:20/08/2014 ರಂದು ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡಾಗ ಉಭಯತ್ರರು ಹಾಜರು ಪ್ರಕರಣವನ್ನು ಮುಂದೂಡಲಾಯ್ತು. ದಿನಾಂಕ:03/09/2014 ರಂದು ಉಭಯತ್ರರು ಹಾಜರು ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಯ್ತು. ಹಿಂದಿನ ಪೀಠಾಧಿಕಾರಿಗಳು ಆದೇಶ ಹೊರಡಿಸದ ಕಾರಣ ಪ್ರಕರಣವನ್ನು ಪುನಃ ವಿಚಾರಣೆಗೆ ತೆಗೆದುಕೊಳ್ಳಲಾಯ್ತು. ದಿನಾಂಕ:25/02/2015 ರಂದು ಉಭಯತ್ರರ ಕೋರಿಕೆಯ ಮೇರೆಗೆ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಯ್ತು.

ಮೇಲ್ಮನವಿದಾರರು ತಮ್ಮ ಮೇಲ್ಮನವಿ ಹಾಗೂ ಲಿಖಿತ ವಾದದಲ್ಲಿ ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಕೃಷ್ಣಾಪುರ ಗ್ರಾಮದ ಸ.ನಂ. 98 ರಲ್ಲಿನ 2-00 ಎಕರೆ ಜಮೀನು ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯ (ಕಿರಿಯ ಶ್ರೇಣಿ) ಕೋಲಾರ ರವರ ಆದೇಶ ಸಂಖ್ಯೆ ಇ.ಎಕ್ಸ್43/2008 ರಂತೆ ಮೇಲ್ಮನವಿದಾರರನ್ನು ವಿವಾದಿತ ಜಮೀನನ್ನು ಹರಾಜು ಕ್ರಯದಾರರೆಂದು (auction purchaser) ಘೋಷಿಸಿರುತ್ತಾರೆ. ಅದರಂತೆ ಮೇಲ್ಮನವಿದಾರರು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 135 ರಂತೆ ವಿವಾದಿತ ಜಮೀನಿನ ಹಕ್ಕುದಾರರಾಗುತ್ತಾರೆ ಎಂದು ವಾದಿಸಿರುತ್ತಾರೆ.

....2

ಹೀಗಿರುವಾಗ ತಹಶೀಲ್ದಾರ್, ಕೋಲಾರ ತಾಲ್ಲೂಕು ಹಾಗೂ ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರು ನಿಯಮಗಳನ್ನು ಸರಿಯಾಗಿ ಪಾಲಿಸದೇ ಎರಡನೇ ಎದುರುದಾರರಿಗೆ ಯಾವುದೇ ಹಕ್ಕು ಇಲ್ಲದಿದ್ದರೂ ಅವರ ಹೆಸರಿಗೆ ವಿವಾದಿತ ಜಮೀನಿನ ಪೈಕಿ 0-20 ಗುಂಟೆ ಖಾತೆ ಮಾಡಿರುವುದು ಕಾನೂನು ಬಾಹಿರವಾಗಿರುತ್ತದೆ ಎಂದು ವಾದಿಸಿ, ತಮ್ಮ ಮೇಲ್ಮನವಿಯನ್ನು ಪುರಸ್ಕರಿಸುವ ಮೂಲಕ ಸಹಾಯಕ ಕಮೀಷನರ್ ರವರ ಪ್ರಶ್ನಿತ ಆದೇಶವನ್ನು ರದ್ದು ಪಡಿಸುವಂತೆ ಕೋರಿರುತ್ತಾರೆ.

ಎರಡನೇ ಎದುರುದಾರರು ತಮ್ಮ ಲಿಖಿತ ವಾದದಲ್ಲಿ ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಕೃಷ್ಣಾಪುರ ಗ್ರಾಮದ ಸ.ನಂ. 98 ರಲ್ಲಿನ ಜಮೀನು ಡಿ.ನಾರಾಯಣಸ್ವಾಮಿ ಬಿನ್ ಎ.ಕೆ.ದಾಸಪ್ಪ ನವರದ್ದಾಗಿದ್ದು, ಇವರು ಹಾಗೂ ಇವರ ಮಕ್ಕಳಾದ ಮುನಿರಾಜು ಮತ್ತು ಮುನೇಂದ್ರ ಕುಮಾರ್ ರವರು ವಿವಾದಿತ ಜಮೀನಿನ ಪೈಕಿ 0-20 ಗುಂಟೆ ಜಮೀನು ಎರಡನೇ ಎದುರುದಾರರಿಗೆ ದಿನಾಂಕ 13/09/2004 ರಂದು ಮಾರಾಟಮಾಡಿದ್ದು, ಅದರಂತೆ ಖಾತೆ ಆಗಿರುತ್ತದೆ. ಮೇಲ್ಮನವಿದಾರರು ಸದರಿ ಡಿ.ನಾರಾಯಣಸ್ವಾಮಿ ರವರ ಹೆಂಡತಿಯಾಗಿದ್ದು, ಇವರು ತಮ್ಮ ಗಂಡನ ವಿರುದ್ಧ ನಿರ್ವಹಣೆ ದಾವೆ ದಾಖಲಿಸಿರುತ್ತಾರೆ ಹಾಗೂ ಇವರು ಹೂಡಿರುವ ದಾವಾ ಸಂಖ್ಯೆ ಓ.ಎಸ್.458/2008 ಮತ್ತು ಇ.ಎಕ್ಸ್43/2008 ರಲ್ಲಿ ಎರಡನೇ ಎದುರುದಾರರನ್ನು ಕಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ಎರಡನೇ ಎದುರುದಾರರು ಇವರಿಗೆ ಮಾರಾಟಮಾಡಿರುವವರ ವಿರುದ್ಧ ಮಾನ್ಯ ಸಿವಿಲ್ ನ್ಯಾಯಾಲಯ (ಕಿರಿಯ ಶ್ರೇಣಿ) ಕೋಲಾರ ರವರಲ್ಲಿ ಸಂಖ್ಯೆ ಓ.ಎಸ್.708/2010 ರಂತೆ ದಾವೆ ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ತಾತ್ಕಾಲಿಕ ಪ್ರತಿಬಂಧಕಾಜ್ಞೆ ನೀಡಿರುತ್ತಾರೆ ಎಂದು ವಾದಿಸಿ, ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಮಾಡಿರುವ ಸಹಾಯಕ ಕಮೀಷನರ್ ರವರ ಪ್ರಶ್ನಿತ ಆದೇಶ ಕಾನೂನುಬದ್ಧವಾಗಿದೆ ಎಂದು ವಾದಿಸಿ ಮೇಲ್ಮನವಿದಾರರ ಅರ್ಜಿಯನ್ನು ವಜಾಮಾಡಬೇಕೆಂದು ಕೋರಿರುತ್ತಾರೆ.

ಕಡತದಲ್ಲಿ ಲಭ್ಯವಿರುವ ದಾಖಲೆಗಳು ಮತ್ತು ಮೇಲ್ಮನವಿದಾರರ ಮೇಲ್ಮನವಿಯನ್ನು ಪರಿಶೀಲಿಸಲಾಗಿ, ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಕೃಷ್ಣಾಪುರ ಗ್ರಾಮದ ಸ.ನಂ. 98 ರಲ್ಲಿ 2-00 ಎಕರೆ ಜಮೀನು ಡಿ.ನಾರಾಯಣಸ್ವಾಮಿ ಬಿನ್ ಎ.ಕೆ.ದಾಸಪ್ಪ ರವರ ಹೆಸರಿನಲ್ಲಿ ಇದ್ದು ಇವರು ದಿನಾಂಕ 13/09/2004 ರಂದು ಪ.ರಿ.ಸಂ. 1866/2004-05 ರಂತೆ ಎರಡನೇ ಎದುರುದಾರರಾದ ಆರ್.ಎಂ.ನಾರಾಯಣಸ್ವಾಮಿ ಬಿನ್ ಮುನಿಶಾಮಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ. ನಂತರ ಡಿ.ನಾರಾಯಣಸ್ವಾಮಿ ರವರ ಹೆಂಡತಿ/ಮೇಲ್ಮನವಿದಾರರಾದ ಶ್ರೀಮತಿ ಕೃಷ್ಣಮ್ಮ ರವರು ದಿನಾಂಕ 13/12/2004 ರಂದು ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಲಯ(ಕಿರಿಯ ಶ್ರೇಣಿ) ಕೋಲಾರ ರವರಲ್ಲಿ ಸಂಖ್ಯೆ ಓ.ಎಸ್.458/2004 ರಂತೆ ತನ್ನ ಗಂಡನ ವಿರುದ್ಧ ನಿರ್ವಹಣೆ ದಾವೆ ಹೂಡಿದ್ದು, ದಿನಾಂಕ 15/09/2006 ರಂದು ಮಾನ್ಯ ನ್ಯಾಯಾಲಯವು ವಿವಾದಿತ ಜಮೀನಿನಲ್ಲಿ ಮೇಲ್ಮನವಿದಾರರು ನಿರ್ವಹಣೆ ರೂ 1000/- ಪ್ರತಿ ಮಾಹೆಗೆ ಅರ್ಹರು ಎಂದು ಆದೇಶಿಸಿರುತ್ತೆ. ನಂತರ ಮಾನ್ಯ ನ್ಯಾಯಾಲಯವು ಎಕ್ಸಿಕ್ಯೂಷನ್ ಪ್ರಕರಣ ಸಂಖ್ಯೆ 43/2008(ಓ.ಎಸ್.458/2004) ರಂತೆ ಮೇಲ್ಮನವಿದಾರರನ್ನು ವಿವಾದಿತ ಜಮೀನಿನ ಹರಾಜು ಕ್ರಯದಾರ (auction purchaser) ಎಂದು ಘೋಷಿಸಿರುತ್ತಾರೆ. ಸಿವಿಲ್ ನ್ಯಾಯಾಲಯದ ಆದೇಶ ಮೇಲುಗೈ (Prevail) ಆಗುವುದು. ಈ ಹಿನ್ನೆಲೆಯಲ್ಲಿ 1ನೇ ಎದುರುದಾರರು ಹೊರಡಿಸಿರುವ ಪ್ರಶ್ನಿತ ಆದೇಶ ನ್ಯೂನ್ಯತೆಯಿಂದ (Suffers from infirmity) ಕೂಡಿದೆ.

## ಆದೇಶ

ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸಿದೆ. ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರ ಪ್ರಶ್ನಿತ ಆದೇಶ ಕ್ರಮಾಂಕ: ಆರ್.ಆರ್.ಟಿ.(ಕೋ)(ಕ)ಸಿ.ಆರ್.329/2013-14 ದಿನಾಂಕ 20/06/2014 ನ್ನು ರದ್ದುಪಡಿಸಿದೆ. ಮಾನ್ಯ ಸಿವಿಲ್ ನ್ಯಾಯಾಲಯ, ಕೋಲಾರ ರವರ ಎಕ್ಸಿಕ್ಯೂಷನ್ ಪ್ರಕರಣ ಸಂಖ್ಯೆ 43/2008(ಓ.ಎಸ್.458/2004) ರಂತೆ ಕ್ರಮಜರುಗಿಸಲು ತಹಶೀಲ್ದಾರ್, ಕೋಲಾರ ತಾಲ್ಲೂಕು ರವರಿಗೆ ನಿರ್ದೇಶಿಸಿ ಆದೇಶಿಸಿದೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಪರಿಷ್ಕರಿಸಿದೆ. ನಂತರ ದಿನಾಂಕ:17/08/2016 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

K.V. [signature]
ಜಿಲ್ಲಾಧಿಕಾರಿಗಳು
ಕೋಲಾರ ಜಿಲ್ಲೆ.

[signature]
ಜಿಲ್ಲಾಧಿಕಾರಿಗಳ ಪರವಾಗಿ
ಕೋಲಾರ ಜಿಲ್ಲೆ.
24/8/16

[signature]
ಜಿಲ್ಲಾಧಿಕಾರಿಗಳ ಪರವಾಗಿ
ಕೋಲಾರ ಜಿಲ್ಲೆ.
25/8/16